## ಚಿರಂಜೀವಿಗೆ ಸೋಲಿನ ಕಹಿ

ವರ್ಷದ ಸಂಕ್ರಾಂತಿ ಹೊತ್ತಿಗೆ ತೆಲುಗು ನಟ ಚಿರಂಜೀವಿ ಅವರಿಗೆ ಗಳಿಕೆಯ ಸುಗ್ಗಿ. ಅಧಿಕ ಶ್ರಾವಣ ಮುಗಿಯುತ್ತಾ ಬಂದ ಹೊತ್ತಿಗೆ ಲುಕ್ಸಾನಿನ ಸುದ್ದಿ. 'ವಾಲ್ತೇರ್ ವೀರಯ್ಯ' ಸಿನಿಮಾದಲ್ಲಿ ಲಾಭದ ಅಲೆ ಮೇಲೆ ಚಿರಂಜೀವಿ ತೇಲಾಡಿದ್ದರು. ಈಗ 'ಭೋಲಾ ಶಂಕರ್' ತೆಲುಗು ಸಿನಿಮಾ ಮಕಾಡೆಯಾಗಿದೆ. ತಮನ್ನಾ ಭಾಟಿಯಾ, ಕೀರ್ತಿ ಸುರೇಶ್ ಅಭಿನಯವೂ ಇದ್ದ ಈ ಚಿತ್ರ ತಮಿಳಿನಲ್ಲಿ 2015ರಲ್ಲಿ ಬಿಡುಗಡೆಯಾಗಿದ್ದ 'ವೇದಾಲಮ್' ಸಿನಿಮಾದ ರೀಮೇಕ್.

ಪರಭಾಷಾ ಚಿತ್ರಗಳನ್ನು ತಮ್ಮ ಜಾಯಮಾನಕ್ಕೆ ಒಗ್ಗಿಸಿಕೊಂಡು ಚಿರಂಜೀವಿ ಯಶಸ್ವಿಯಾದ ಮಾದರಿಗಳು ಇತ್ತೀಚೆಗೆ ಹೆಚ್ಚಾಗಿವೆ. ಆದರೆ, 'ಭೋಲಾ ಶಂಕರ್' ಅದಕ್ಕೆ ಅಪವಾದ. ಹೂಡಿದ ಬಂಡವಾಳದ ಶೇ. 50ರಷ್ಟಾದರೂ ನಷ್ಟವನ್ನು ಈ ಚಿತ್ರ ಅನುಭವಿಸಲಿದೆ ಎನ್ನುವ ಮಾತಿದೆ. ಕನ್ನಡದಲ್ಲಿ ಪುನೀತ್ ಅಭಿನಯದ 'ವೀರ ಕನ್ನಡಿಗ' ಹಾಗೂ ಅದೇ ವಸ್ತುವನ್ನು ತೆಲುಗಿನಲ್ಲಿ 'ಆಂಧ್ರವಾಲ' (ಜೂನಿಯರ್ ಎನ್‌ಟಿಆರ್ ನಾಯಕ) ಹೆಸರಿನಲ್ಲಿ ಏಕಕಾಲದಲ್ಲಿ ಚಿತ್ರೀಕರಿಸಿದ್ದ ಮೆಹರ್ ರಮೇಶ್ 'ಭೋಲಾ ಶಂಕರ್' ನಿರ್ದೇಶಕ. ಅವರೀಗ ತಲೆಮೇಲೆ ಕೈಹೊತ್ತಿದ್ದಾರೆ. ■



## ಸನ್ನಿ ದೇವಲ್‌ಗೆ ಶುಕ್ರದೆಸೆ



1991ರಲ್ಲಿ 'ಫರಿಶ್ತೆ' ಎನ್ನುವ ಹಿಂದಿ ಸಿನಿಮಾ ತೆರೆಕಂಡಿತ್ತು. ಧರ್ಮೇಂದ್ರ, ವಿನೋದ್ ಖನ್ನಾ, ರಜನೀಕಾಂತ್, ಜಯಪ್ರದಾ, ಶ್ರೀದೇವಿ ಅದರಲ್ಲಿ ಅಭಿನಯಿಸಿದ್ದರು. ಒಂದು ಬಗೆಯಲ್ಲಿ ಉತ್ತರ, ದಕ್ಷಿಣ ಧ್ರುವಗಳನ್ನು ಬೆಸೆದಿದ್ದ ತಂತ್ರ. ಹೇಳಿಕೇಳಿ ಅದು ಸಾಹಸಪ್ರಧಾನ ಸಿನಿಮಾ. ಅದರಲ್ಲಿ ಕಾನೂನನ್ನೇ ಲೆಕ್ಕಿಸದ ಖಳರಿದ್ದರು. ಗಡಿಯಲ್ಲಿ ನಡೆಯುವ ಕಥಾನಕವಾದದ್ದರಿಂದ ಯೋಧರೂ ಇದ್ದರು. ಬಪ್ಪಿ ಲಹರಿ ಸಂಗೀತದ ಹಾಡುಗಳಿದ್ದವು. ಎಲ್ಲದರಿಂದ ಸಿನಿಮಾ ಆ ಕಾಲದಲ್ಲಿ ಹಿಟ್ ಆಗಿತ್ತು.

ಆಗಿನ್ನೂ ಮೂವತ್ತೊಂದು ವರ್ಷ ವಯಸ್ಸಿನವರಾಗಿದ್ದ ಅನಿಲ್ ಶರ್ಮ 'ಫರಿಶ್ತೆ' ನಿರ್ದೇಶಿಸಿದ್ದರು. ಈಗ ಅರವತ್ತಮೂರನೇ ವಯಸ್ಸಿನಲ್ಲಿ ಅವರು ನಿರ್ದೇಶಿಸಿರುವ ಸಿನಿಮಾ 'ಗದರ್ 2' ಕೂಡ ಯಶಸ್ವಿಯಾಗಿದೆ. 1991ರಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿ ಲಾಭ ಎಂದರೆ ಅಬ್ಬಾ ಎನ್ನುತ್ತಿದ್ದರು. 'ಫರಿಶ್ತೆ'ಯ ಲಾಭ ಅಷ್ಟಿತ್ತು. ಈಗ 'ಗದರ್ 2' ಐದುನೂರು ಕೋಟಿ ರೂಪಾಯಿಗೂ ಹೆಚ್ಚು ಹಣ ಬಾಚಿಹಾಕಿದೆ. 2001ರಲ್ಲಿ ಬಿಡುಗಡೆಯಾಗಿದ್ದ 'ಗದರ್ — ಏಕ್ ಪ್ರೇಮ್ ಕಥಾ' ಭಾರತ, ಪಾಕಿಸ್ತಾನ 1947ರಲ್ಲಿ ವಿಭಜನೆಯಾದಾಗಿನ ಸಂದರ್ಭದ ಕಥೆಯನ್ನು ಒಳಗೊಂಡಿತ್ತು. ಬೂಟಾ ಸಿಂಗ್ ಎಂಬ ವ್ಯಕ್ತಿಯ ನಿಜ ಬದುಕಿನ ಕಥಾವಳಿಯನ್ನು ಹೊಂದಿದ್ದ, ಸಿಖ್–ಮುಸ್ಲಿಂ ಹುಡುಗಿಯ ಪ್ರೇಮಕಥೆ ಅದು. ಶಕ್ತಿಮಾನ್ ತಲ್ವಾರ್ ಬರೆದಿದ್ದ ಚಿತ್ರಕಥೆ ಹಾಗೂ ಸನ್ನಿ ದೇವಲ್ ಭುಜಬಲ ಪರಾಕ್ರಮದ ದರ್ಶನದಿಂದಾಗಿ ಸುಮಾರು ₹18 ಕೋಟಿ ಬಜೆಟ್‌ನ ಸಿನಿಮಾ ₹130 ಕೋಟಿಗೂ ಹೆಚ್ಚು ಆದಾಯ ಗಳಿಸಿ ಸೂಪರ್‌ಹಿಟ್ ಆಗಿತ್ತು.

ಅದೇ ಶಕ್ತಿಮಾನ್ ತಲ್ವಾರ್ 'ಗದರ್ 2' ಚಿತ್ರಕಥೆಯನ್ನು ವಿಸ್ತರಿಸಿದ್ದಾರೆ. ಇದರಲ್ಲಿ 1971ರ ಟೈಮ್‌ಲೈನ್ ಇದೆ. ಈ ಬಾರಿ ಸನ್ನಿ ದೇವಲ್ ತಮ್ಮ ಮಗನನ್ನು (ಈ ಪಾತ್ರದಲ್ಲಿ ನಿರ್ದೇಶಕರ ಮಗ ಉತ್ಕರ್ಷ್ ಶರ್ಮ ಅಭಿನಯಿಸಿದ್ದಾರೆ) ಕಾಪಾಡಲು ಹೋರಾಡುವ ಕಥನವಿದೆ. ₹80 ಕೋಟಿ ವೆಚ್ಚದಲ್ಲಿ ತಯಾರಾದ ಈ ಸಿನಿಮಾ ಏಳು ಪಟ್ಟು ಹಣ ಗಳಿಸಿರುವುದೀಗ ಎಷ್ಟೋ ಜನರಿಗೆ ಅಚ್ಚರಿ. ಅದರಲ್ಲೂ ಏಕಪರದೆಯ ಚಿತ್ರಮಂದಿರಗಳಲ್ಲಿ ಈ ಸಿನಿಮಾವನ್ನು ಮುಗಿಬಿದ್ದು ನೋಡುವವರ ಸಂಖ್ಯೆ ಹೆಚ್ಚಾಗಿದೆ.

ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಿ ಆರೋಗ್ಯದ ಸಮಸ್ಯೆ ಇದ್ದರೂ 66 ವರ್ಷ ದಾಟಿದ ವಯಸ್ಸಿನಲ್ಲಿಯೂ ಸನ್ನಿ ದೇವಲ್ ತೆಗೆದುಕೊಂಡಿರುವ ರಿಸ್ಕ್ ಕಂಡು ಅನೇಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಮಲೆಯಾಳಂ ನಟ ದುಲ್ಕರ್ ಸಲ್ಮಾನ್, ಪ್ರಿಯಾಂಕಾ ಚೋಪ್ರಾ ಅವರಲ್ಲಿ ಪ್ರಮುಖರು. ಈ ಯಶಸ್ಸು 'ಗದರ್ 3' ಚಿತ್ರ ಮಾಡಲು ಪ್ರೇರೇಪಿಸಿದೆ ಎಂದೂ ಚಿತ್ರತಂಡದ ಕೆಲವರು ಹೇಳುತ್ತಿದ್ದಾರೆ. ದೊಡ್ಡ ಸ್ಟಾರ್‌ಗಳೆಲ್ಲ ಗೆಲುವಿಗಾಗಿ ಏದುಸಿರು ಬಿಡುತ್ತಿರುವ ಈ ಹೊತ್ತಿನಲ್ಲಿ ಸನ್ನಿ ದೇವಲ್ ಸಿನಿಮಾ ವಿಜಯ ಅಧ್ಯಯನಯೋಗ್ಯ ವಿಷಯವಂತೂ ಹೌದು. ■